ಕರ್ನಾಟಕ ವಿಧಾನಸಭೆ
13ನೇ ವಿಧಾನಸಭೆ 2ನೇ ಅಧಿವೇಶನ

413 ಶ್ರೀ.ಎಂ.ಶ್ರೀನಿವಾಸ್
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು.

ಅ) ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿರುವ ಸ್ತ್ರೀಶಕ್ತಿ ಭವನಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಕೇಂದ್ರ ಸ್ಥಾನದಲ್ಲಿ ಜಿಲ್ಲಾ ಮಟ್ಟದ ಮಾರುಕಟ್ಟೆ ಸಂಕೀರ್ಣ ಹಾಗೂ ಶ್ರೀರಂಗಪಟ್ಟಣದಲ್ಲಿ ತಾಲ್ಲೂಕು ಮಟ್ಟದ ಸ್ತ್ರೀಶಕ್ತಿ ಭವನ/ಮಾರಾಟ ಮಳಿಗೆ ಸೇರಿ 2 ಭವನಗಳಿಗೆ ಮಂಜೂರಾತಿ ನೀಡಲಾಗಿದೆ.

ಆ) ಮಂಡ್ಯ ಜಿಲ್ಲಾ ಕೇಂದ್ರದಲ್ಲಿರುವ ಸ್ತ್ರೀಶಕ್ತಿ ಭವನಗಳ ಸಂಖ್ಯೆ ಎಷ್ಟು;

ಜಿಲ್ಲಾ ಕೇಂದ್ರದ ಬಾಲಭವನದ ಆವರಣದಲ್ಲಿ ಜಿಲ್ಲಾ ಮಟ್ಟದ ಒಂದು ಸ್ತ್ರೀಶಕ್ತಿ ಭವನ/ಮಾರುಕಟ್ಟೆ ಸಂಕೀರ್ಣ ನಿರ್ಮಿಸಲು ಹಣ ಬಿಡುಗಡೆ ಮಾಡಲಾಗಿದೆ.

ಇ) ಜಿಲ್ಲಾ ವ್ಯಾಪ್ತಿಯಲ್ಲಿರುವ ಸ್ತ್ರೀಶಕ್ತಿ ಭವನಗಳ ಕಟ್ಟಡಕ್ಕಾಗಿ ಈವರೆವಿಗೂ ಸರಕಾರದಿಂದ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು (ತಾಲ್ಲೂಕುವಾರು ವಿವರ ನೀಡುವುದು);

- ಜಿಲ್ಲಾ ಸಂಕೀರ್ಣ ನಿರ್ಮಾಣಕ್ಕಾಗಿ ರೂ.9.00 ಲಕ್ಷ ಹಾಗೂ
- ಶ್ರೀರಂಗಪಟ್ಟಣ ತಾಲ್ಲೂಕು ಮಾರುಕಟ್ಟೆ ಭವನ/ಮಳಿಗೆ ನಿರ್ಮಾಣಕ್ಕಾಗಿ ರೂ15.00 ಲಕ್ಷ ಅನುದಾನ ಸೇರಿ ಇದುವರೆವಿಗೆ ಒಟ್ಟು ರೂ.24.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಈ) ಜಿಲ್ಲಾ ವ್ಯಾಪ್ತಿಯಲ್ಲಿರುವ ಸ್ತ್ರೀಶಕ್ತಿ ಭವನಗಳ ಕಟ್ಟಡಗಳ ಕಾಮಗಾರಿ ಪ್ರಾರಂಭವಾಗಿದೆಯೇ;

ಶ್ರೀರಂಗಪಟ್ಟಣದಲ್ಲಿ ತಾಲ್ಲೂಕು ಮಾರುಕಟ್ಟೆ ಭವನ/ಮಳಿಗೆ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದ್ದು, ಜಿಲ್ಲಾ ಕೇಂದ್ರದಲ್ಲಿ ಇನ್ನೂ ಪ್ರಾರಂಭವಾಗಿರುವುದಿಲ್ಲ.

ಉ) ಹಾಗಿದ್ದಲ್ಲಿ, ಈ ಕಾಮಗಾರಿಗಳ ಪ್ರಾರಂಭಕ್ಕೆ ಇರುವ ಅಡಚಣೆಗಳೇನು (ವಿವರ ನೀಡುವುದು)?

ಜಿಲ್ಲಾ ಕೇಂದ್ರ ಬಾಲಭವನ ಆವರಣದಲ್ಲಿ ಜಿಲ್ಲಾ ಮಾರುಕಟ್ಟೆ ಮಳಿಗೆ ನಿರ್ಮಾಣಕ್ಕಾಗಿ ಲೋಕೋಪಯೋಗಿ ಇಲಾಖೆಯು ರೂ.10.00 ಲಕ್ಷ ಅಂದಾಜು ಪಟ್ಟಿ ತಯಾರಿಸಿದ್ದು, ಇಲಾಖೆವತಿಯಿಂದ ರೂ.6.25ಲಕ್ಷ ಬಿಡುಗಡೆ ಮಾಡಲಾಗಿತ್ತು. ಪೂರ್ಣಮೊತ್ತ ಬಿಡುಗಡೆಯಾಗದೆ ಟೆಂಡರ್ ಕರೆಯಲು ಸಾಧ್ಯವಿಲ್ಲವೆಂದು ಲೋಕೋಪಯೋಗಿ ಇಲಾಖೆಯು ತಿಳಿಸಿದ್ದರಿಂದ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ. ಈಗ ದಿನಾಂಕ:19-01-2009ರ ಸರ್ಕಾರದ ಆದೇಶದಲ್ಲಿ

ಹೊಂದಾಣಿಕೆ ಮೊತ್ತ ರೂ.2.75ಲಕ್ಷ ಬಿಡುಗಡೆಯಾಗಿದ್ದು, ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ.

ಮಮಇ 48 ಮಮಅ 2009

(ಪಿ.ಎಂ.ನರೇಂದ್ರಸ್ವಾಮಿ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

415 ಶ್ರೀ ನಾಡಗೌಡ ವೆಂಕಟರಾವ್

ಅ) ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬನಶಂಕರಿ ಶಾಖೆಯಲ್ಲಿ ಮೆ॥ ರಿಲಯಬಲ್ ಡೆವಲಪರ್ಸ್ ರವರು ಯೋಜನಾ ಸಾಲ ಪಡೆದಿದ್ದಾರೆಯೇ?

ರಿಲಯಬಲ್ ಡೆವಲಪರ್ಸ್ ಇದಕ್ಕೆ ಅಪೆಕ್ಸ್ ಬ್ಯಾಂಕು ರೂ.25.00 ಕೋಟಿಗಲ ವಸತಿ ಯೋಜನಾ ಸಾಲ ನೀಡಿರುತ್ತದೆ.

ಆ) ಮೆ॥ ರಿಲಯಬಲ್ ಡೆವಲಪರ್ಸ್ ರವರು ಯೋಜಿಸಿದ ಸನ್ ಫೀಲ್ಡ್ಸ್ ವಸತಿ ಯೋಜನೆ ಹೊಸೂರಿನಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಇದಕ್ಕೆ ರಾಜ್ಯ ಸಹಕಾರಿ ಅಪೆಕ್ಸ್ ನಿಯಮಿತ, ಸಾಲ ಮಂಜೂರಾತಿಯ ಎಲ್ಲಾ ನಿಯಮಗಳನ್ನು ಪಾಲಿಸಿ, ಸಾಲ ಮಂಜೂರು ಮಾಡಿದೆಯೇ? ಹಾಗಿಲ್ಲದಿದ್ದಲ್ಲಿ, ಯಾವ ನಿಯಮಗಳನ್ನು, ಮಾರ್ಗಸೂಚಿಗಳನ್ನು ಪಾಲಿಸಿದೆ?

ಬ್ಯಾಂಕು ಭಾಗಶ: ನಿಯಮಗಳನ್ನು ಪಾಲಿಸಿ ಸಾಲ ಮಂಜೂರು ಮಾಡಿದೆ. ಬ್ಯಾಂಕಿನ ಆಡಳಿತ ಮಂಡಳಿಯಿಂದ ಅನುಮೋದಿತವಾದ ಸಾಲ ನೀಡಿಕೆ ನಿಯಮಗಳನ್ವಯ ಬ್ಯಾಂಕಿನ ಆಡಳಿತ ಮಂಡಳಿಯು ಸಾಲ ಮಂಜೂರು ಮಾಡಿರುತ್ತದೆ.

ಇ) ಮೆ॥ ರಿಲಯಬಲ್ ಡೆವಲಪರ್ಸ್ ಯೋಜಿಸಿದ ರಿಲಯಬಲ್ ಸನ್ ಫೀಲ್ಡ್ಸ್ ವಸತಿ ಯೊಜನೆಗೆ ಮಂಜೂರು ಮಾಡಿರುವ ರೂ.25 ಕೋಟಿ ಸಾಲದ ಬಗ್ಗೆ ಸರ್ಕಾರದಿಂದ ಎಚ್ಚರಿಕೆ ನೀಡಲಾಗಿದೆಯೇ? ಹಾಗಿದ್ದಲ್ಲಿ ವಿವರ ನೀಡುವುದು.

ಸರ್ಕಾರದ ಪತ್ರ ಸಂ: ಸಿಒ 52/ ಸಿಎಲ್ಎಸ್/ 2008 ದಿ: 23–7–2008 ರಲ್ಲಿ ಇನ್ನು ಮುಂದೆ ಇಂತಹ ನಿಯಮಗಳ ಉಲ್ಲಂಘನೆಗೆ ಅವಕಾಶ ಕೊಡದಂತೆ ಎಚ್ಚರ ವಹಿಸುವಂತೆ ನಿರ್ದೇಶಿಸಿರುತ್ತದೆ.

ಈ) ಮೆ॥ ರಿಲಯಬಲ್ ಡೆವಲಪರ್ಸ್ ಯೋಜಿಸಿದ ರಿಲಯಬಲ್ ಸನ್ ಫೀಲ್ಡ್ಸ್ ವಸತಿ ಯೊಜನೆಗೆ ಸಾಲ ಮಂಜೂರು ಮಾಡುವುದು ಸರಿಯಲ್ಲ ಎಂದು ಅಂದಿನ ಬ್ಯಾಂಕ್ ಅಧಿಕಾರಿಗಳು ಟಿಪ್ಪಣಿ ನೀಡಿದ್ದಲ್ಲಿ, ವಿವರ ನೀಡುವುದು.

ನಬಾರ್ಡ್ ನಿಗದಿಪಡಿಸಿರುವಂತೆ ವೈಯಕ್ತಿಕ ಸಾಲದ ಮಿತಿ ರೂ.35.00 ಲಕ್ಷಗಳಿದ್ದು ಹಾಗೂ ಸಹಕಾರೇತರ ಸಂಸ್ಥೆಗಳಿಗೆ ನೀಡಬಹುದಾದ ಸಾಲದ